ಮೂಲತಃ ಮಂಗಳೂರಿನ ಮೂಡಬಿದಿರೆಯವರಾದ ಶ್ರೀಮತಿ ದೇವಿ ಹಿಂದೂಸ್ಥಾನಿ ಗಾಯಕಿ. ಅಮೆರಿಕದಲ್ಲಿ ಹಲವು ವರ್ಷಗಳ ಕಾಲ ವಾಸವಾಗಿದ್ದವರು, ಈಗ ಮೈಸೂರು ನಿವಾಸಿ. 'ಜೋಡು' ಕತೆಯ ಮೂಲಕ ಅವರು ಇದೇ ಮೊದಲ ಬಾರಿಗೆ ಕಥಾಲೋಕ ಪ್ರವೇಶಿಸಿದ್ದಾರೆ. ಪ್ರಸ್ತುತ ಸಂಗೀತ ವಿದುಷಿ ಅಪೂರ್ವ ಗೋಖಲೆ ಅವರ ಬಳಿ ಸಂಗೀತಾಭ್ಯಾಸ ಮುಂದುವರೆಸಿದ್ದಾರೆ. ಸಂಗೀತ ಗುರುವಾಗಿಯೂ ಮಾರ್ಗದರ್ಶನ ಮಾಡುತ್ತಿದ್ದಾರೆ.

ಪಿಯುಸಿಯವರೆಗೆ ಹೇಗೋ ಶಾಲೆ ಮುಗಿಸಿದ ಏಕನಾಥ ಮುಂದೆ ಶಾಲೆ ಕಲಿಕೆಗೆ ಶರಣು ಹೊಡೆದು ಗವಾಯಿಗಳು ಹಾಡುವ ಶಾಸ್ತ್ರೀಯ ಸಂಗೀತವನ್ನೇ ತಾನೂ ಮುಂದುವರಿಸುತ್ತೇನೆಂಬ ತೀರ್ಮಾನಕ್ಕೆ ಬಂದಾಗ ಇದಕ್ಕೆ ಮನೆಯವರ ಒಪ್ಪಿಗೆಯೇನೂ ಸಿಕ್ಕಿರಲಿಲ್ಲ. ಸಾಧನೆಯತ್ತ ಮುಖಮಾಡಿ ಗುರುಗಳೊಂದಿಗೆ ಹಲವಾರು ದಿನಗಳನ್ನು ಕಳೆದರೂ, ಮುಂಬರುವ ದಿನಗಳನ್ನೂ ಹೀಗೆಯೇ ಕಳೆಯಲು ಧೈರ್ಯವಾಗದೆ ಪಟ್ಟಣದೆಡೆಗೆ ಸಾಗಿದ್ದ.

ಕೋಣೆಯೊಂದನ್ನು ಬಾಡಿಗೆಗೆ ಪಡೆದು 'ಗುರುಕೃಪಾ ಸಂಗೀತ ಶಾಲೆ' ಎಂಬ ಬೋರ್ಡ್ ತಗುಲಿಸಿ ಒಳಗೆ ವಿದ್ಯಾಮಾತೆ ಸರಸ್ವತಿ ಹಾಗೂ ಗವಾಯಿಗಳ ಫೋಟೊಗಳನ್ನು ಇಟ್ಟು ಅಕ್ಕಪಕ್ಕದ ಮಕ್ಕಳಿಗೆ 'ಸರೆಗಮ' ಕಲಿಸಲು ಆರಂಭಿಸಿಬಿಟ್ಟ. ತನ್ನ ಸಾಧನೆಯನ್ನು ಮಾತ್ರ ಒಂದಿಷ್ಟೂ ಕುಂದಿಲ್ಲದಂತೆ ನಡೆಸಿ, ಪ್ರಾವೀಣ್ಯತೆ ಗಳಿಸುತ್ತಿದ್ದರೂ ಸಿಗುವ ಸಂಗೀತ ಕಾರ್ಯಕ್ರಮಗಳಿಂದ ಬಾಯಿಮಾತಿನ ಹೊಗಳಿಗೆ ದೊರಕುತ್ತಿತ್ತೇ ಹೊರತು ಸಂಭಾವನೆ ಪಡೆದು ತಾನು ಬಯಸಿದಂತೆ ಗವಾಯಿಗಳಿಗೆ ಗುರುಕಾಣಿಕೆ ಕೊಡಲು ಏಕನಾಥನಿಂದ ಸಾಧ್ಯವಾಗಲೇ ಇಲ್ಲ.

'ಚಹಾ ಖಾಲಿಯಾಗಿದ್ರೆ ಗ್ಲಾಸ್ ಇಲ್ಲಿಡಿ'

ಟೀಸ್ಟಾಲ್‌ನ ಹನುಮಂತುವಿನ ಮಾತು ಕೇಳಿ, ಗ್ಲಾಸ್ ಮೇಜಿನ ಮೇಲಿಟ್ಟು ಮನೆಯೆಡೆಗೆ ನಡೆದ. ಏಕನಾಥನಿಗೆ ಗವಾಯಿಗಳು ತೀರಿಕೊಂಡ ದಿನ ನೆನಪಾಯಿತು. ಪಟ್ಟಣಕ್ಕೆ ಬಂದು 10 ವರ್ಷಗಳಾದರೂ ಕಾಲೂರಲು ಹೆಣಗಾಡುತ್ತಿದ್ದ ಏಕನಾಥ ವರ್ಷಕ್ಕೊಂದೆರಡು ಬಾರಿ ಊರಿಗೆ ಹೋಗಿ ಮುಖ ತೋರಿಸಿ ಬಂದುಬಿಡುತ್ತಿದ್ದ. ಗವಾಯಿಗಳ ಆರೋಗ್ಯ ಹದಗೆಟ್ಟ ಸುದ್ದಿ ಕೇಳಿ ಅವರ ಮನೆಗೆ ಧಾವಿಸಿದ. ಅವನನ್ನು ಕಂಡ ಕೂಡಲೇ ಹತ್ತಿರ ಕರೆದರು ಗುರುಗಳು. ಮಾತು ಕ್ಷೀಣವಾಗಿತ್ತು. ಆದರೆ, ಏನೋ ಹೇಳುವುದಕ್ಕಿದೆ ಎಂಬ ತುಡಿತವೇ ಅವರ ಮಾತಿಗೆ ಶಕ್ತಿ ತುಂಬಿತ್ತು.

ಅನಾರೋಗ್ಯದಿಂದ ಬಳಲುತ್ತಿದ್ದ ಗುರುಗಳ ಬಳಿ ಹೆಚ್ಚು ಮಾತನಾಡಬೇಕೋ ಬೇಡವೋ ಎಂಬ ಅಳುಕಿನಲ್ಲಿದ್ದ ಏಕನಾಥ. ಆದರೆ, ಗುರುಗಳು ಏನನ್ನೋ ಹಾಡಿ, ಅವನಿಗೆ ತಿಳಿಸಿಕೊಡುವ ಉತ್ಸಾಹದಲ್ಲಿದ್ದರು. ನಿಧಾನವಾಗಿ ಬಂದು ಒಂದು ಕುರ್ಚಿಯ ಮೇಲೆ ಕುಳಿತರು. ಅಲ್ಲಿ ಕುಳಿತರೆಂದರೆ ಅವರೀಗ ತನಗೆ ಪಾಠ ಮಾಡುತ್ತಾರೆ ಎಂದೇ ಅರ್ಥವಾಗಿ, ಏಕನಾಥನೂ ಸ್ವೀಕಾರ ಮನೋಭಾವದಲ್ಲಿ ಸುಮ್ಮನೇ ಕುಳಿತ. ಲಲತ್ ಮತ್ತು ಗೌರಿ ಎಂಬ ಎರಡು ರಾಗಗಳ ಜೋಡಣೆಯಿಂದಾದ ಲಲಿತಾಗೌರಿ ಎಂಬ ಜೋಡ್ ರಾಗವನ್ನು ಕ್ಷೀಣ ದನಿಯಲ್ಲಿ ಹಾಡಿ ತೋರಿಸಿದರು. ಅವರು ವಾಕ್ಯಗಳನ್ನು ಪೂರ್ಣ ಮಾಡದೆ ಇದ್ದರೂ ಅವನು ಅರ್ಥ ಮಾಡಿಕೊಳ್ಳಬಲ್ಲವನಾಗಿದ್ದ. ಆದರೆ, ಅವರು ರಾಗದ ಏರಿಳಿತವನ್ನು ಪೂರ್ಣ ಮಾಡದೆ ಇರುವವರೇ ಅಲ್ಲ. ಜೋಡ್ ರಾಗದ ಬಂದೀಶ್‌ಗಳನ್ನು ಬರೆದುಕೊಳ್ಳಲು ಹೇಳಿದರು. ಅವನು ಬರೆದುಕೊಳ್ಳುತ್ತಲೇ ಹೋದ. ಅವರು ಧಾರೆಯೆರೆಯುತ್ತಿದ್ದಂತೆ, ಅವನು ಮೊಗೆದು ಕುಡಿದಂತೆ... ಮಾತಿನ ಸಟೆಯಿಲ್ಲದೇ... ಶ್ರುತಿಯ ಹಿನ್ನೆಲೆಯೊಂದೇ ಅಲ್ಲೊಂದು ಮಹಾನ್ ಸಂವಾದವನ್ನು ಏರ್ಪಡಿಸಿತ್ತು.

ಅವರು ದಣಿದಂತೆ ಕಂಡರು. ಅವನೇ ಒಂದಿಷ್ಟು ರಾಗಿ ಗಂಜಿಯನ್ನು ತಂದು ಕುಡಿಸಿದ. ಕಿಟಕಿಯ ಹೊರಗೆ ಹಕ್ಕಿಯೊಂದರ ಉಲಿ. ಗೋಡೆ ಮೇಲೆ ಕ್ಯಾಲೆಂಡರ್ ಟಕ್ ಟಕ್ ಎಂದು ಗಾಳಿಗೆ ಬಡಿದುಕೊಳ್ಳುತ್ತಿತ್ತು. ಗುರುಗಳು ಮಾತನಾಡಿದರು: 'ನೀನು ಆರಿಸಿಕೊಂಡ ದಾರಿ ತುಂಬಾ ಕಷ್ಟದ್ದು, ಸಾಧನೆ ಬಿಡಬೇಡ' ಎನ್ನುತ್ತಾ ಕುರ್ಚಿಯಿಂದ ಎದ್ದು, ನಿಧಾನವಾಗಿ ತಮ್ಮ ಜೋಡಿ ತಂಬೂರಿಗಳನ್ನು ಎತ್ತಿ ಏಕನಾಥನ